ವಿವಿಧ ಬಣ್ಣಗಳು, ಸ್ವಭಾವಗಳು, ಸಂಸ್ಕೃತಿಗಳು ಅಲ್ಲಿದ್ದವು. ಆದರೆ ಅಲಿ, ಷಾದಿಯರನ್ನು ಅಚ್ಚರಿಯಿಂದ ನೋಡುವುದರಲ್ಲಿ, ಮುಸಿ ನಗುವುದರಲ್ಲಿ ಎಲ್ಲರೂ ಒಗ್ಗಟ್ಟಾದರು. ಅಸಾಧಾರಣ ಎತ್ತರವಿದ್ದ ತಮ್ಮ ದೇಹಗಳನ್ನು ಆದಷ್ಟು ಅವರು ಬಗ್ಗಿಸಿ ಕ್ಲಾಸ್ ರೂಮಿನ ಕೊನೆಯ ಬೆಂಚಿನಲ್ಲಿ ತಲೆತಗ್ಗಿಸಿ ಕೂತರು. ಜೋಡಿಸಿಟ್ಟ ಬೆಂಚು ಮತ್ತು ಡೆಸ್ಕಿನ ಸಂದಿಯಲ್ಲಿ ತಮ್ಮ ಮೊಣಕಾಲುಗಳನ್ನು ಸೇರಿಸಿಡಲು ಮತ್ತು ಪ್ರತಿ ಸಲ ಅಧ್ಯಾಪಕರು ಬರುವಾಗ ಎದ್ದು ನಿಲ್ಲಲು ಅವರು ಹೆಚ್ಚು ಕಷ್ಟಪಡಬೇಕಿತ್ತು.

ಮೊದಲ ದಿನಗಳ ಗಲಿಬಿಲಿಯ ನಂತರ ಅವರು ಕ್ಲಾಸಿನ ಬೇರೆ ಹುಡುಗರನ್ನು ಅಪರೂಪಕ್ಕೆ ನೋಡಿದರು. ಮಿತವಾಗಿ ನಕ್ಕರು. ತಮಗಿಂತ ಎಷ್ಟೋ ಕಿರಿಯವರೆಂಬ ಪ್ರೀತಿಯಲ್ಲಿ, ತಾವಾಗಿ ಬಂದು ಮಾತಾಡಿದ ಎರಡೋ ಮೂರೋ ಜನರಲ್ಲಿ ಒಂದೆರಡು ಮಾತಿನ ಉತ್ತರವನ್ನೂ ಕೊಟ್ಟರು. ಅಶ್ವಿನ್ ಅವರಲ್ಲಿ ಒಬ್ಬನಾಗಿದ್ದ. ಅಲಿಗೂ ಷಾದಿಗೂ ನಂತರದ ಕ್ಲಾಸಿನ ಎತ್ತರದ ಹುಡುಗ ಅವನು. ಇಂಗ್ಲಿಷ್ ಮಿಸ್ಸಿನ ಕ್ಲಾಸಿನಲ್ಲಿ ಎದ್ದುನಿಂತು ಪ್ರಶ್ನೆಗಳಿಗೆ ಉತ್ತರಿಸುವಾಗ ನೀವು ಕಣ್ಣುಗಳನ್ನು ತಗ್ಗಿಸುವುದೇತಕ್ಕೆ ಎಂಬ ತುಂಟ ಪ್ರಶ್ನೆಯನ್ನು ಅವರಿಬ್ಬರ ಕಡೆಗೆ ಎಸೆದದ್ದು ಅಶ್ವಿನ್. ''ಇಂಗ್ಲಿಷ್ ಮಿಸ್ ನೋಡೋಕೆ ಸೂಪರ್ ಆಗಿದಾರೆ ಅಲ್ವೇನೋ?'' ಅವನ ಕಣ್ಣುಗಳಲ್ಲಿ ಹದಿಹರೆಯದ ಆರಂಭದಲ್ಲಿ ಗಂಡು ಹುಡುಗರಲ್ಲಿ ಉಂಟಾಗುವ ಅಹಂಕಾರ ಮಿಶ್ರಿತ ಚೇಷ್ಟೆ ಹೊಳೆಯಿತು. ''ಇಷ್ಟು ಸುಂದರವಾದ ಕಣ್ಣುಗಳನ್ನು ಹೇಗೆ ನೋಡದಿರೋಕಾಗುತ್ತೆ?''

ಇಂಗ್ಲಿಷ್ ಟೀಚರ್ ರೈನಾ ಶ್ರೀಲಂಕಾದವಳು. ಹೊಳೆವ ಕಂದು ಬಣ್ಣ ಮತ್ತು ಉದ್ದನೆಯ ನೇರ ಕೂದಲು. ಬೇರೆ ಅಧ್ಯಾಪಕರಂತೆ ಅವಳು ತಲೆಯನ್ನೂ ಮುಖವನ್ನೂ ಹಿಜಾಬ್‌ನಿಂದ ಮುಚ್ಚಿರಲಿಲ್ಲ. ಸುಕ್ಕುಗಳಿಲ್ಲದ ತುಂಬುತೋಳಿನ ಉಡುಪು ಮತ್ತು ಸ್ಕರ್ಟ್ ತೊಡುತ್ತಿದ್ದಳು. ಮೇಲೊಂದು ಅರ್ಧ ತೆರೆದ ಯುನಿಫಾರ್ಮ್ ಕೋಟ್. ಕೋಟಿನ ಕಿಸೆಗಳಲ್ಲಿ ಕೈಯಿಟ್ಟು ಶಾಲೆಯ ಪುಟ್ಟ ಹುಡುಗಿಯರ ಆರಾಧನೆ ತುಂಬಿದ ಕಣ್ಣುಗಳ ಮುಂದಿನಿಂದ ಅವಳು ಆತ್ಮವಿಶ್ವಾಸದಿಂದ ನಡೆದುಹೋಗುವುದನ್ನು ಒಂದೆರಡು ಸಲ ಅಲಿ ಆಕಸ್ಮಿಕವಾಗಿ ಗಮನಿಸಿದ್ದ. ಗೌರವ ಮತ್ತು ಮೆಚ್ಚುಗೆಯಿಂದ ಕೂಡಿದ ಒಂದು ಪುಟ್ಟ ನಗು ಅವನ ಕಣ್ಣಂಚಿನಲ್ಲಿತ್ತು. ಜೊತೆಗೆ ಸಣ್ಣದೊಂದು ಅಪರಾಧಿ ಪ್ರಜ್ಞೆ. ಪಶ್ಚಾತ್ತಾಪ ಯಾಕೆ? ಆವಾಗೆಲ್ಲಾ ಅವನು ಮನಸ್ಸಲ್ಲೇ ಹೇಳಿದ: ಪರ್ವತಗಳ ಸಂದಿಯಲ್ಲಿ ಬಿದ್ದಿರುವ ಬಿಸಿಲಿನ ಒಂದು ತುಣುಕಿನಿಂದ ಹೊಮ್ಮುವ ಕಾವಿನ ಕಡೆಗೆ ಒಂದು ಸಲ ಕಣ್ಣುಹಾಯಿಸುವುದು ಅಷ್ಟು ದೊಡ್ಡ ತಪ್ಪೇನೂ ಅಲ್ಲ.

ಇಂಗ್ಲಿಷ್ ಕ್ಲಾಸುಗಳಲ್ಲಿ ಅಲಿಯೂ ಷಾದಿಯೂ ಒಂದು ಬಾರಿಯಾದರೂ ರೈನಾಳ ಮುಖದೆಡೆಗೆ ಕಣ್ಣೆತ್ತಲಿಲ್ಲ. ಯಾಕೆಂದು ಅರ್ಥವಾಗದಿದ್ದರೂ ಅವರನ್ನು ಕ್ಲಾಸುಗಳಲ್ಲಿ ಚುರುಕಾಗಿರಿಸಲು ರೈನಾ ಸಾಧ್ಯವಾದಷ್ಟು ಪ್ರಯತ್ನಿಸಿದಳು. ಅಲಿಯ ಜೊತೆ ಬರುವ ಷಾದಿ ಮಾತ್ರ ತರಗತಿಯಲ್ಲಿ ಸದಾ ತಲೆತಗ್ಗಿಸಿ ನಿಶ್ಶಬ್ದವಾಗಿದ್ದು ಅವಳನ್ನು ನಿರಾಸೆಗೊಳಿಸಿದ. ಆದರೆ, ಅಲಿ ಹಾಗಿರಲಿಲ್ಲ. ಬಾಗಿದ ದಪ್ಪ ಕಣ್ಣ ರೆಪ್ಪೆಗಳಿಂದ ನಿರಂತರವಾಗಿ ಮರೆಯಾಗಿರುವ ಕಣ್ಣುಗಳು. ಪ್ರಶ್ನೆಗಳಿಗೆ ಒಂದೋ ಎರಡೋ ಶಬ್ದಗಳಲ್ಲಾದರೂ ಬಹಳಷ್ಟು ಹೇಳುವ ಉತ್ತರಗಳು. ಮೋಜಿಗಾಗಿ ಕ್ಲಾಸಲ್ಲಿ ಕೊಡುವ ಪ್ರಬಂಧದ ವಿಷಯಗಳಿಗೆ ಹರುಕು ಮುರುಕು ಭಾಷೆಯಲ್ಲಿ ಅವನು ಬಿಡಿಸಿಡುವ ಒಬ್ಬಂಟಿ ಚಿತ್ರಗಳು.

''ನಿಮ್ಮ ಸ್ವಂತ ಊರಿನ ಬಗ್ಗೆ ಹೇಳಿ'' ಒಂದು ದಿನ ರೈನಾ ಕ್ಲಾಸಿನಲ್ಲಿ ಹೇಳಿದಳು. ಕ್ಲಾಸಿನಲ್ಲಿದ್ದ ಹೆಚ್ಚಿನವರು ಆ ದೇಶದವರಾಗಿರಲಿಲ್ಲ. ವಿದ್ಯಾರ್ಥಿಗಳಿಂದ ದೊಡ್ಡ ಪ್ರತಿಕ್ರಿಯೆಯೇನೂ ಬರಲಿಲ್ಲ. ಕೆಲವರು ಖಾಲಿಯಾದ, ಉದಾಸೀನದ ಕಣ್ಣುಗಳಿಂದ ಅವಳನ್ನು ನೋಡುತ್ತಾ ಕುಳಿತರು. ಕೆಲವರು ಊರಿನಲ್ಲಿ ಒಂದು ಮನೆಯೂ, ಮನೆಯಲ್ಲಿ ಒಂದು ಕಾರೂ, ಎರಡು ಬೆಕ್ಕುಗಳೂ ಇವೆ ಎಂದೇನೋ ಹೇಳಿದರು. ಅಪರೂಪಕ್ಕೆ ಕೆಲವರು ಮನೆಯ ನೆನಪಿನಲ್ಲಿ ಭಾವುಕರಾಗಿ ತಲೆತಗ್ಗಿಸಿ ಕುಳಿತರು.